ಪ್ರಮಾಣ ವಚನ ಬೋಧಿಸಿದ ದಿನಾಂಕಃ **02.03.2026.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಆರ್.ಎಮ್. ವಕೀಲರಿಂದ**

ಸಾಕ್ಷಿಗೆ ನಿ.ಪಿ.**2** ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ತೋರಿಸಿದಾಗ ಅದರಲ್ಲಿರುವ **3**ನೇ ಪ್ರತಿವಾದಿಯ ಫೋಟೋ ಮತ್ತು ಸಹಿಯನ್ನು ನೋಡಿ ಒಪ್ಪಿ ಕೊಳ್ಳುತ್ತಾರೆ. ಗಾಯತ್ರಮ್ಮನವರು ನನ್ನ ಗಂಡನ ಅಣ್ಣನವರಾದ ವೆಂಕಟೇಶ್ ರವರ ಹೆಂಡತಿ ಆಗಬೇಕು. ಅವರಿಗೆ ವರಲಕ್ಷ್ಮಿ, ವಾಣಿ ಮತ್ತು ಮಧು ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ಅವರುಗಳು ಕೂಡ ಆ ದಿನ ಸಬ್ ರಿಜಿಸ್ಟಾರ್ ಕಚೇರಿಗೆ ನಮ್ಮ ಜೊತೆ ಬಂದು ಸಹಿಯನ್ನು ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವು ನೋಡಿಲ್ಲ ನಮ್ಮ ಜೊತೆ ಅವರು ಬರಲಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ ಸಹಿಮಾಡಿದ ನಂತರ ಸದರಿಯವರು ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಿ.ಪಿ.**2** ಕ್ರಯಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆಂದು ಕೇಳಿ ತಿಳಿದುಕೊಂಡಿದ್ದೀರಾ? ಎಂದರೆ ಇಲ್ಲ. ಸಾಕ್ಷಿಗೆ ನಿ.ಪಿ.**2**ನ್ನು ತೋರಿಸಿ ಅದಕ್ಕೆ ನೀವು ಮತ್ತು ನಿಮ್ಮ ಗಂಡ ಸಹಿ ಮಾಡಿದ್ದೀರಾ ಎಂದು ತೋರಿಸಿದಾಗ ಸಾಕ್ಷಿಯು ಸದರಿ ಸಹಿಗಳನ್ನು ಒಪ್ಪಿ ಕೊಂಡಿದ್ದು ಅವುಗಳನ್ನು ನಿ.ಪಿ.**2** (ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು.

ನಾನು ನಾಲ್ಕನೇ ತರಗತಿಯ ತನಕ ವಿದ್ಯಾಭ್ಯಾಸ ಮಾಡಿದ್ದೇನೆ ನನಗೆ ಕನ್ನಡ ಓದಲು ಬರುವುದಿಲ್ಲ. ನಿ.ಪಿ.**2**ಕ್ಕೆ ನಾನು ಮತ್ತು ನನ್ನ ಗಂಡ ತಾಲ್ಲೂಕು ಕಚೇರಿ ಹತ್ತಿರ ಸಹಿ ಮಾಡಿರುತ್ತೇವೆ. ಸಾಕ್ಷಿಯು ಮುಂದುವರೆದು ರೇಷನ್ ಕಾರ್ಡ್ ಫೋಟೋ ತೆಗೆಸಬೇಕೆಂದು ನಮ್ಮನ್ನು ಕರೆದುಕೊಂಡು ಹೋಗಿ ಫೋಟೋ ತೆಗೆಸಿದ್ದಾರೆಂದು ಹೇಳುತ್ತಾರೆ. ನಾವು ತಾಲ್ಲೂಕು ಕಚೇರಿಗೆ ಹೋದಾಗ ರೇಷನ್ ಕಾರ್ಡ್ ಗೆ ಕ್ಯೂ ಇತ್ತು

ಅಲ್ಲಿ ನಾವು ಫೋಟೋ ತೆಗೆಸಿಕೊಂಡು ವಾಪಸ್ಸು ಬಂದಿರುತ್ತೇವೆ. ಆ ಸಮಯದಲ್ಲಿ ದೀಪಾನವರು ಕೂಡ ರೇಷನ್ ಕಾರ್ಡ್ ಗೆ ಫೋಟೋವನ್ನು ತೆಗೆಸಿಕೊಳ್ಳಲು ಬಂದಿದ್ದರು. ಆ ಸಮಯದಲ್ಲಿ ದೀಪಾನವರು ಫೋಟೋ ತೆಗೆಸಿಕೊಳ್ಳಲು ಒತ್ತಾಯ ಮಾಡಿದ್ದಾರಾ? ಎಂದರೆ ಹೌದು. ಸಾಕ್ಷಿಯು ಮುಂದುವರೆದು ದೀಪಾ ಮತ್ತು ಅವರ ಗಂಡ ಇಬ್ಬರೂ ಕೂಡ ನಮಗೆ ಸಹಿ ಮಾಡಿ ಫೋಟೋ ತೆಗೆಸಿಕೊಳ್ಳಲು ಒತ್ತಾಯಾ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಈ ವಿಚಾರವನ್ನು ಈ ಹಿಂದೆ ಈ ಕೇಸಿನಲ್ಲಿ ಹೇಳಿದ್ದೀರಾ? ಎಂದರೆ ಇಲ್ಲ. ಈ ರೀತಿ ರೇಷನ್ ಕಾರ್ಡ್ ಗೆ ಫೋಟೋವನ್ನು ತೆಗೆಸಿಕೊಂಡಿದ್ದೇನೆಂದು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. ಆದರೆ ತಾಲ್ಲೂಕು ಕಚೇರಿಯಲ್ಲಿ ಇದೆ.

ಸಾಕ್ಷಿಗೆ ನಿ.ಪಿ.**2**ನ್ನು ತೋರಿಸಿದಾಗ ಅದನ್ನು ನೋಡಿ ಕ್ರಯಪತ್ರ ಎಂದು ಬರೆದಿದೆ ಎನ್ನುತ್ತಾರೆ. ನಿ.ಪಿ.**2**ರಲ್ಲಿ ನಮ್ಮ ಫೋಟೋ ಮತ್ತು ಸಹಿ ಇದೆ ಎಂದರೆ ಸರಿ. ನಿ.ಪಿ. **2**ಕ್ಕೆ ಶ್ರೀನಿವಾಸ್ ಆಚಾರಿ**,** ಮೋಹನ್ ಶಂಕರ್ ಎಂಬುವವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಿ.ಪಿ.**2**ರಲ್ಲಿ ಇರುವ ಫೋಟೋಗಳು ನನ್ನ ತಾತ ದಾಸಪ್ಪ ಮತ್ತು ಅಜ್ಜಿ ವೆಂಕಟಮ್ಮನವರದ್ದು ಎಂದರೆ ಸರಿ. ಅದರಲ್ಲಿ ಅವರಿಬ್ಬರ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಇದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯರಿಗೆ **15** ಲಕ್ಷ ಕೊಡುತ್ತೇವೆಂದು ಈ ದಿನ ಹೇಳಿರುತ್ತೀರಾ? ಯಾವ ದುಡ್ಡನ್ನು ಕೊಡಲು ಒಪ್ಪಿದ್ದಿರಾ? ಎಂದರೆ ಸಾಕ್ಷಿಯು ಪ್ರತಿವಾದಿಯರು ನಮಗೆ ಅಂಗಡಿಯ ಬೋಗ್ಯಕ್ಕಾಗಿ **5** ವರೆ ಲಕ್ಷ ಕೊಟ್ಟಿದ್ದಾರೆ ಅದಕ್ಕೆ **10** ಲಕ್ಷ ಸೇರಿಸಿ ವಾಪಸ್ಸು ಕೊಡೋಣ ಎಂದು ನಾವು ಹೇಳಿರುತ್ತೇವೆ. ಈ ವಿಚಾರವನ್ನು ದಾವೆಯಲ್ಲಿ ಹೇಳಿ ಬರೆಸಿದ್ದೀರಾ? ಎಂದರೆ ಹೌದು. **2010**ರಲ್ಲಿ ಪ್ರತಿವಾದಿಯರಿಗೆ ಬೋಗ್ಯ ಮಾಡಿರುತ್ತೇವೆ. ಪ್ರತಿವಾದಿಯರು ದಾವಾ ಆಸ್ತಿಯ ಎದುರುಗಡೆ ಇರುವ ಮಳಿಗೆಯಲ್ಲಿ ಸ್ವರ್ಣ ಜ್ಯೂವೆಲರಿ ಅಂಗಡಿಯನ್ನು ನಡೆಸುತ್ತಿದ್ದಾರೆ ಹಾಗೂ ದಾವಾ ಆಸ್ತಿಯಲ್ಲಿ ಬೋಗ್ಯಕ್ಕೆ ಬಂದಿರಲ್ಲಿಲ್ಲ ಎಂದರೆ ಸಾಕ್ಷಿಯು ಹಳೆಯ ಅಂಗಡಿಯನ್ನು ಖಾಲಿ ಮಾಡುತ್ತಿದ್ದೆವೆ ನಮ್ಮ ಅಂಗಡಿ ಬೇಕು

ಎಂದು ಪ್ರತಿವಾದಿಯರು ಉತ್ತರಿಸುತ್ತಾರೆ. ಈ ರೀತಿ ಪ್ರತಿವಾದಿಯರು ಬೋಗ್ಯ ಪಡೆಯಲು ಬಂದು ಮೋಸ ಮಾಡಿ ಕ್ರಯಪತ್ರ ಬರೆಸಿಕೊಂಡಿದ್ದಾರೆಂದು ಈ ಕೇಸಿನಲ್ಲಿ ಬರೆಸಿ ಹಾಕಿದ್ದೀರಾ? ಎಂದರೆ ಹೌದು.

ತೂಬಗೆರೆ ಶಟ್ರು ಎಷ್ಟು ವರ್ಷಗಳಿಂದ ಚಿನ್ನದ ಅಂಗಡಿಯನ್ನು ನಡೆಸುತ್ತಿದ್ದಾರೆ? ಎಂದರೆ ನನಗೆ ಗೊತ್ತಿಲ್ಲ. **1**ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಖಾತೆಯನ್ನು ನಾನು ನೋಡಿಲ್ಲ. ಈಗ **1**ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಚಿನ್ನದ ಅಂಗಡಿಯನ್ನು ನಡೆಸುತ್ತಿದ್ದಾರೆ ಎಂದರೆ ಸರಿ. **1**ನೇ ಪ್ರತಿವಾದಿಯ ದಾವಾ ಆಸ್ತಿಯನ್ನು ಖರೀದಿಸಿದ ನಂತರ ನಗರ ಸಭೆಯವರು ಅವರ ಹೆಸರಿಗೆ ಖಾತೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಖಾತೆಯು ಯಾರ ಹೆಸರಿನಲ್ಲಿ ಇದೆ ನಗರಸಭೆಗೆ ಹೋಗಿ ತಿಳಿದುಕೊಂಡಿದ್ದೀರಾ? ಎಂದರೆ ಇಲ್ಲ. ದಾವಾ ಆಸ್ತಿಯನ್ನು ಖರೀದಿಸಿದ ನಂತರ **1**ನೇ ಪ್ರತಿವಾದಿಯು ನಗರಸಭೆಗೆ ತೆರಿಗೆ ಕಟ್ಟುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನಾನು ತೆರಿಗೆ ಕಟ್ಟಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ತೆರಿಗೆ ವಾಪತಿ ರಶೀದಿಯನ್ನು ಹಾಜರು ಪಡಿಸಿದ್ದೇನೆ.

ಈ ಕೇಸ್ ಹಾಕುವ ಪೂರ್ವದಲ್ಲಿ ನನ್ನ ತಾತ ದಾಸಪ್ಪನವರು ಪ್ರತಿವಾದಿಗೆ ನೋಟೀಸ್ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಸದರಿ ನೋಟೀಸಿನಲ್ಲಿ ದಾಸಪ್ಪನವರು ನಾವೆಲ್ಲ ಸೇರಿ ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ್ದೇವೆ ಆದರೆ ವಿಸ್ತೀರ್ಣದಲ್ಲಿ ಲೋಪ ಇದೆ ಅದರ ತಿದ್ದುಪಡಿ ಆಗಬೇಕೆಂದು ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ನೋಟೀಸಿಗೆ **1**ನೇ ಪ್ರತಿವಾದಿಯು ಪ್ರತ್ಯೂತ್ತರ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆಯು ನನ್ನ ಗಂಡನ ಹೆಸರಿನಲ್ಲಿ ಇದೆ. ಆದರೆ ಈ ಖಾತೆ ನನ್ನ ಹೆಸರಿನಲ್ಲಿ ಇದೆ. ನಮ್ಮ ಹೆಸರಿನಲ್ಲಿರುವ ಆಸ್ತಿಯ ವಿಸ್ತೀರ್ಣ ಗೊತ್ತು ಪೂರ್ವ – ಪಶ್ಚಿಮ **42**ವರೆ ಅಡಿ ಹಾಗೂ ಉತ್ತರ – ದಕ್ಷಿಣ **33**ವರೆ ಅಡಿ ಮತ್ತು **41**ಅಡಿ ಇದೆ. ಸದರಿ ವಿಸ್ತೀರ್ಣಕ್ಕೆ ದಾಸಪ್ಪನವರು ನನ್ನ ಗಂಡನಿಗೆ ದಾನ ಪತ್ರ ಮಾಡಿದ್ದಾರೆ. **1**ನೇ ಪ್ರತಿವಾದಿಗೆ ದಿನಾಂಕಃ**18.01.2010**ರಂದು ಕ್ರಯಪತ್ರವಾದ **4** ದಿನದ ನಂತರ ದಾಸಪ್ಪನವರು ದಿನಾಂಕಃ**23.01.2010**ರಲ್ಲಿ ಉಳಿಕೆ **16 20** ಅಡಿ ವಿಸ್ತೀರ್ಣದ

ಜಾಗವನ್ನು ನನ್ನ ತಾಯಿ ನರಸಮ್ಮನಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಈ ಕೇಸಿನಲ್ಲಿ ಗಾಯತ್ರಮ್ಮ ಹಾಗೂ ಅವರ ಮಕ್ಕಳು **1**ನೇ ಪ್ರತಿವಾದಿಗೆ ಮಾಡಿ ಕೊಟ್ಟಿರುವ ಕ್ರಯಪತ್ರ ಸರಿ ಇದೆ ಎಂದು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎಂದರೆ ಗೊತ್ತಿಲ್ಲ. **1**ನೇ ಪ್ರತಿವಾದಿಗೆ ಮಾರಾಟ ಮಾಡಿ ಉಳಿದ ವಿಸ್ತೀರ್ಣಕ್ಕೆ ಗಾಯತ್ರಮ್ಮ ಹಾಗೂ ಅವರ ಮಕ್ಕಳು ವಿಭಾಗ ಕೋರಿ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ದಾಸಪ್ಪನ ಮೇಲೆ ಒಂದು ಕೇಸ್ ಹಾಕಿರುವ ವಿಚಾರ ಮಾತ್ರ ಗೊತ್ತು. ಸದರಿ ಕೇಸಿನಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ? ಎಂದರೆ ಸರಿ. **2**ನೇ ಪ್ರತಿವಾದಿಯು ಮೃತಪಟ್ಟು **2** ವರ್ಷವಾಯಿತು. ಸದರಿ ವಿಭಾಗದ ದಾವೆಯಲ್ಲಿ ಗಾಯತ್ರಮ್ಮನವರು ಈ ದಾವೆ ಆಸ್ತಿಯನ್ನು ದೀಪನವರಿಗೆ ಮಾರಾಟ ಮಾಡಿ ವಿನಃ ಕಾರಣ ಅವರಿಗೆ ತೊಂದರೆ ಕೊಡಲು ಈ ಕೇಸನ್ನು ಹಾಕಿದ್ದಾರೆ ಎಂದು ಲಿಖಿತ ಹೇಳಿಕೆಯಲ್ಲಿ ಬರೆಸಿ ಹಾಕಿದ್ದಾರೆ ಗೊತ್ತಿಲ್ಲ. ನನ್ನ ಗಂಡ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಾರೆ ಎಂದರೆ ಸರಿ. ನನ್ನ ಗಂಡನವರು ದೀಪನವರಿಗೆ ಮಾರಾಟ ಮಾಡಿದ ಜಾಗವನ್ನು ಸೇರಿಸಿ ದಾವೆ ಹಾಕಿದ್ದ ಕಾರಣ ನ್ಯಾಯಾಲಯವು ತಾತ್ಕಾಲಿಕ ನಿರ್ಭಂದಾಜ್ಞೆಯ ಅರ್ಜಿಯನ್ನು ವಾಜಾ ಮಾಡಿದೆ ಎಂದರೆ ಸಾಕ್ಷಿ ವಾಜಾ ಆಗಿರುವುದು ಸರಿ ಆದರೆ ಕಾರಣ ಗೊತ್ತಿಲ್ಲ. ಕ್ರಯಪತ್ರವನ್ನು ಬೋಗಸ್ ಮಾಡಿದ್ದಾರೆಂದು ದೀಪ ಮತ್ತು ಅವರ ಗಂಡನ ಮೇಲೆ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೀರಾ? ಎಂದರೆ ಹೌದು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

**1**ನೇ ಪ್ರತಿವಾದಿಯು ದಿನಾಂಕ:**18.01.2010**ರಂದು **12.76 12.45 10.10**ರ ಪೈಕಿ **12.3 11.5 41.5** ಅಳತೆಯುಳ್ಳ ಅಂಗಡಿ ಸ್ವತ್ತನ್ನು **5**ವರೆ ಲಕ್ಷ ಮಾರುಕಟ್ಟೆ ಬೆಲೆಯನ್ನು ನಮಗೆ ನೀಡಿ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದಾರೆಂದರೆ ಸರಿಯಲ್ಲ. ದಾಸಪ್ಪ , ವೆಂಕಟಮ್ಮ, ಅರಸಮ್ಮ , ನಾಗರಾಜು ಮತ್ತು ನಾನು ಸೇರಿ ಈ ದಾವೆಯನ್ನು ಹಾಕಿದ್ದೇವೆ ಎಂದರೆ ಸರಿ. ದಾವಾ ಪತ್ರದಲ್ಲಿ **1**ನೇ

ಪ್ರತಿವಾದಿಯು ಪೂರ್ವ – ಪಶ್ಚಿಮ **12** X **11 /2** ಅಡಿಗಳನ್ನು ಮತ್ತು ಉತ್ತರ–ದಕ್ಷಿಣ **21** ಅಡಿ ವಿಸ್ತೀರ್ಣವುಳ್ಳ ಅಂಗಡಿ ಮತ್ತು ಆರ್.ಸಿಸಿ ಮನೆಯನ್ನು **1**ನೇ ಪ್ರತಿವಾದಿಯು ಖರೀದಿಸಿದ್ದಾರೆಂದು ಬರೆಸಿದ್ದೇವೆಂದರೆ ಸಾಕ್ಷಿಯು ಈ ಕೇಸನ್ನು ದಾಸಪ್ಪನವರು ಹಾಕಿದ್ದು ಅವರು ಈ ರೀತಿ ಬರೆಸಿದ್ದಾರೆಂದು ಹೇಳುತ್ತಾರೆ. ನಾನು ದಾವಾ ಪತ್ರವನ್ನು ಓದಿಲ್ಲ. ದಾವೆಯಲ್ಲಿ ಈ ರೀತಿ ಬರೆಸಿರುವುದು ನನಗೆ **2010**ರಲ್ಲಿ ತಿಳಿಯಿತು. ದಾಸಪ್ಪನವರು ಈಗ **2**ವರ್ಷದ ಹಿಂದೆ ಮೃತಪಟ್ಟಿದ್ದಾರೆ. ದಾಸಪ್ಪನವರು ಮೃತಪಟ್ಟ ನಂತರ ದಾವಾ ಪತ್ರವನ್ನು ತಿದ್ದುಪಡಿ ಮಾಡಲು ಪ್ರಯತ್ನ ಪಟ್ಟಿದ್ದೀರಾ? ಎಂದರೆ ಇಲ್ಲ. ನಾನು ಈ ಕೇಸಿನಲ್ಲಿ **1**ನೇ ಪ್ರತಿವಾದಿ ಮಾಲೀಕತ್ವ ಇರುವ ವಿಸ್ತೀರ್ಣವನ್ನು ಒಪ್ಪಿಕೊಂಡಿದ್ದೇನೆ ಎಂದರೆ ಗೊತ್ತಿಲ್ಲ. ಈ ಕೇಸಿನಲ್ಲಿ ಯಾವ ಪರಿಹಾರ ಕೇಳಿದ್ದೀರಾ ಎಂದರೆ ಸಾಕ್ಷಿಯು ನಾವು ಬ್ಯಾಂಕಿನಲ್ಲಿ ಸಾಲ ಮಾಡಿ ಮನೆಯನ್ನು ಕಟ್ಟಿದ್ದೇವೆ **1**ನೇ ಪ್ರತಿವಾದಿಯು **20** ಎಂದು ಹೇಳಿ **41** ಅಡಿಯನ್ನು ಎಂದು ಬೋಗಸ್ ಪತ್ರ ಬರೆಸಿಕೊಂಡಿದ್ದಾರೆ ಅದಕ್ಕಾಗಿ ಈ ಕೇಸನ್ನು ಹಾಕಿದ್ದೇವೆ ಎಂದು ಹೇಳುತ್ತಾರೆ. **1**ನೇ ಪ್ರತಿವಾದಿಯು ಖರೀದಿಸಿದ ವಿಸ್ತೀರ್ಣದಲ್ಲಿ ಅವರು ಚಿನ್ನದ ಅಂಗಡಿಗೆ ಬೇಕಾದ ಲಾಕರ್ ಗಳನ್ನು ಮಾಡಿಸಿಕೊಂಡಿದ್ದಾರೆ ಎಂದರೆ? ಸರಿಯಲ್ಲ. ದಾಸಪ್ಪನವರಿಗೆ ದಾವಾ ಅಸ್ತಿಯು ಅವರ ತಾಯಿಯ ಕಡೆಯಿಂದ ಬಂದಿದೆ . ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಈ ದಾವೆಯಲ್ಲಿ ನನ್ನ ತಾಯಿಯ ಹೆಸರಿಗೆ ಆಗಿರುವ ದಾನಪತ್ರ ಮತ್ತು ಗಂಡನ ಹೆಸರಿಗೆ ಆಗಿರುವ ದಾನ ಪತ್ರದ ಆಧಾರದ ಮೇಲೆ ಹಕ್ಕು ಘೋಷಣೆ ಮಾಡಬೇಕೆಂದು ಕೇಳಿದ್ದೇವೆಂದರೆ ಸಾಕ್ಷಿಯು ನನ್ನ ತಾಯಿಯ ಹೆಸರಿಗೆ ಆಗಿರುವ ದಾನಪತ್ರದ ಬಗ್ಗೆ ಗೊತ್ತಿಲ್ಲ ಆದರೆ ಗಂಡನ ಹೆಸರಿಗೆ ಆಗಿರುವ ದಾನಪತ್ರದ ಬಗ್ಗೆ ಗೊತ್ತು. **1**ನೇ ಪ್ರತಿವಾದಿಯು ಅವರು ಖರೀದಿಸಿದ ಸ್ವತ್ತಿಗೆ ಅವರೆ ವಿದ್ಯುತ್ ಬಿಲ್ ಪಾವತಿಸುತ್ತಿದ್ದಾರೆ ಎಂದರೆ ಸಾಕ್ಷಿಯು ಅವರು ಒಳಗೊಳಗೆ ಕಟ್ಟುತ್ತಿದ್ದಾರೆಂದು ಹೇಳುತ್ತಾರೆ. ದಿನಾಂಕ.**28.01.2010**ರಂದು **1**ನೇ ಪ್ರತಿವಾದಿಯು ಮಾರಾಟ ಮಾಡಿದ ಸ್ವತ್ತನ್ನು ಹೊರತು ಪಡಿಸಿ ಉಳಿಕೆ ವಿಸ್ತೀರ್ಣಕ್ಕೆ ನನ್ನ ತಾತ ಮತ್ತು ಅಜ್ಜಿ ಸೇರಿ **2**ನೇ ಪ್ರತಿವಾದಿ

ಮತ್ತು ಅವರ ಮಕ್ಕಳಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆಂದರೆ ಗೊತ್ತಿಲ್ಲ. ಸದರಿ ಉಳಿಕೆ ವಿಸ್ತೀರ್ಣದಲ್ಲಿ **2**ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಹಕ್ಕು ಖುಲಾಸೆ ಪತ್ರದ ಆಧಾರದ ಮೇಲೆ ಸ್ವಾ ಧೀನ ಹೊಂದಿದ್ದಾರೆಂದು ಬರೆಸಿದ್ದೇವೆಂದರೆ ಸರಿಯಲ್ಲ. **2**ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟ ನಂತರ **1**ನೇ ವಾದಿಯು ನೆಲೆ ಅಂತಸ್ತಿನಲ್ಲಿ ಒಂದು ಅಂಗಡಿಯನ್ನು ಮತ್ತು **1**ನೇ ಅಂತಸ್ತಿನಲ್ಲಿ ಒಂದು ಅಂಗಡಿಯನ್ನು ಉಳಿಸಿಕೊಂಡಿದ್ದೇನೆಂದರೆ ಈ ದಾವೆಯಲ್ಲಿ ಬರೆಸಿದ್ದಾರೆಂದರೆ ಗೊತ್ತಿಲ್ಲ. ಆ ಉಳಿಸಿಕೊಂಡಿರುವ ಅಂಗಡಿಗಳನ್ನೆ **1**ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ಅವರೇ ಅದರಲ್ಲಿ ಸ್ವಾ ಧೀನದಲ್ಲಿದ್ದಾರೆಂದು ಈ ದಾವೆಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಮ್ಮ ಪ್ರಕಾರ ಉತ್ತರ – ದಕ್ಷಿಣ **21** ಅಡಿ ಇರುವುದನ್ನು **41** ಅಡಿ ಎಂದು ಬರೆಸಿಕೊಂಡಿದ್ದಾರೆಂದು ನಾವು ಹೇಳುತ್ತಿದ್ದೇವೆ ಎಂದರೆ ಸರಿ. **21** ಅಡಿ ಅಂಗಡಿ ಜಾಗವಿದೆ ಉಳಿಕೆ ಜಾಗ ಮನೆಯ ಜಾಗವಿದೆ ಎಂದು ನ್ಯಾಯಲಾಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ವಾದಿಯರು ಮತ್ತು **2**ನೇ ಪ್ರತಿವಾದಿ ಹಾಗೂ ಅವರ ಮಕ್ಕಳು ಕ್ರಯಪತ್ರಕ್ಕೆ ನೊಂದಣಿ ಮಾಡಿಸಿ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. **18.01.2010**ರಲ್ಲಿ ನಾವೆಲ್ಲರೂ ಸಬ್ ರೀಸ್ಟ್ರಾರ್ ಕಚೇರಿಗೆ ಹೋಗಿ **5**ವರೆ ಲಕ್ಷ ಕ್ರಯದ ಮೊತ್ತವನ್ನು ಪಡೆದು ಲಿಖಿತ ಹೇಳಿಕೆಯಲ್ಲಿ ನಮೂದಿಸಿದ ವಿಸ್ತೀರ್ಣವನ್ನು **1**ನೇ ಪ್ರತಿವಾದಿಗೆ ಕ್ರಯಪತ್ರದ ಮೂಲಕ ಬರೆದುಕೊಟ್ಟಿದ್ದೇವೆಂದರೆ ಸರಿಯಲ್ಲ. **1**ನೇ ಪ್ರತಿವಾದಿಗೆ ಮನೆಯನ್ನು ಬಿಟ್ಟುಕೊಡಿ ಎಂದು ನಾವು ಕೇಳುತ್ತಿದ್ದವೆ . **1**ನೇ ಪ್ರತಿವಾದಿಯು ಖರೀದಿಸುವ ಪೂರ್ವದಲ್ಲಿ ಜಾಗವನ್ನು ಅಳತೆ ಮಾಡಿ ಕಾನೂನು ಪ್ರಕಾರ ವಾಗಿ ಖರೀದಿಸಿದ್ದಾರೆಂದರೆ ಸರಿಯಲ್ಲ. **1**ನೇ ಪ್ರತಿವಾದಿಯ ಹೆಸರಿಗೆ ಆಗಿರುವ ಖಾತೆಯನ್ನು ಪ್ರಶ್ನೆ ಮಾಡಿದ್ದೀರಾ? ಎಂದರೆ ಇಲ್ಲ. ಪೂರ್ತಿ ಕಟ್ಟಡದ ವಿಸ್ತೀರ್ಣ ಪೂರ್ವ – ಪಶ್ಚಿಮವಾಗಿ **41** ಅಡಿ ಇದೆ ಎಂದರೆ ಸರಿ . ಅದರಲ್ಲಿ ಕೆಳಗಡೆ ಅಂಗಡಿಗಳು ಮೇಲೆ ಮನೆಗಳು ಇವೆ ಎಂದರೆ ಸರಿ. ನಾನು ಮತ್ತು ನನ್ನ ತಾಯಿ ಪ್ರತಿದಿನ **1**ನೇ ಪ್ರತಿವಾದಿಯ ಸ್ವಾ ಧೀನಕ್ಕೆ ತೊಂದರೆ ಯನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. **1**ನೇ ಪ್ರತಿವಾದಿಯ

ಗಂಡನ ಹತ್ತಿರ ಸಾಕಷ್ಟು ಹಣ ಇದೆ ಹೇಗಾದರೂ ಮಾಡಿ ಹಣ ವಸೂಲಿ ಮಾಡಬೇಕು ಎಂಬ ಕಾರಣಕ್ಕಾಗಿ ನಾವೆಲ್ಲರೂ ಸುಳ್ಳು ದಾವೆಯನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ